## ವಾರ್ತಾ ವಿಶ್ಲೇಷಣೆ

### ಭಾರತೀಯತೆ ಎತ್ತ ಹೋಗಿದೆ?

ನಮ್ಮ ಭಾರತೀಯ ಜನರಲ್ಲಿ ತಮ್ಮ ದೇಶದ ಬಗ್ಗೆ ಹಿಂದೆ ಇರುತ್ತಿದ್ದ ಅಭಿಮಾನ ಗೌರವಗಳು ಕಡಿಮೆಯಾಗಿವೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಭಾರತೀಯ ಭಾವನೆಗಳು ಎತ್ತ ಸಾಗುತ್ತಿದೆ? ನಮ್ಮ ಸಂಸ್ಕೃತಿಯ. ಆದರ್ಶಗಳ ಹಿರಿಮೆಯ ಬಗ್ಗೆ ಗೌರವವಿರುವವರನ್ನು ದುರ್ಬೀನು ಹಾಕಿ ಹುಡುಕಬೇಕಾಗಿರುವಂತಹ ಪರಿಸ್ಥಿತಿ ಬಂದಿರುವುದು ಬಹಳ ಶೋಚನೀಯ.

ಬೆಂಗಳೂರಿನ ಬ್ರಿಗೇಡ್ ರೋಡಿನಲ್ಲಿ ಪಡ್ಡೆ ಹುಡುಗ, ಹುಡುಗಿಯರು U.S.A ಎಂಬ ಲಾಂಛನವಿರುವ ಟೀಶರ್ಟನ್ನು ತೊಟ್ಟುಕೊಂಡು ಆ ದೇಶದ ಬಾವುಟಕ್ಕೆ ಹೋಲುವ ಸ್ಕಾರ್ಫನ್ನು ತಲೆಗೆ ಕಟ್ಟಿಕೊಂಡು. ಅಶ್ಲೀಲ ರೀತಿಯಲ್ಲಿ ಚಡ್ಡಿಯನ್ನು ಧರಿಸಿ, ಭಾರತೀಯರನ್ನು (ಸೀರೆ ಉಟ್ಟ ಮಹಿಳೆಯರನ್ನು) ಕಂಡು 'ಬ್ಲಡಿ ಇಂಡಿಯನ್ಸ್' ಎಂದು ಛೇಡಿಸಿ ಅವಮಾನಿಸಿದ ಪ್ರಸಂಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸ್ವಲ್ಪ ಆಂಗ್ಲ ಭಾಷೆಯನ್ನು ಕಲಿತು. ಒಂದೆರಡು ಹೊರ ದೇಶಗಳನ್ನು ಕಂಡು ಹಿಂದಿರುಗಿದ ಭಾರತೀಯರು ಸಂಪೂರ್ಣವಾಗಿ ಪಾಶ್ಚಾತ್ಯ ರೀತಿಗಳನ್ನೇ ಅನುಕರಿಸುವುದು, ನಮ್ಮ ಜನರನ್ನು ಕೀಳಾಗಿ ಕಾಣುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಅನುಕರಣೆಯೇ ಸಂಸ್ಕೃತಿಯ ಕುರುಹು ಎಂದು ಇವರೆಲ್ಲ ಭಾವಿಸಿದ್ದರೆ ಇದು ವಿಷಾದನೀಯ.

ಮಹಾತ್ಮ ಗಾಂಧೀಜಿಯವರು ಸ್ವದೇಶಿ ಉಡುಪನ್ನು ತೊಡಲು ಮೊದಲು ಮಾಡಿದ ಆಂದೋಲನಕ್ಕೆ ಈಗ ಎಳ್ಳಷ್ಟೂ ಬೆಲೆ ಇಲ್ಲವಾಗಿದೆ. ಭೋಗ ರಾಷ್ಟ್ರವಾದ ಅಮೆರಿಕದಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ನಮ್ಮ ಧರ್ಮ ಹಾಗೂ ಸಂಸ್ಕೃತಿಯನ್ನು ಬೋಧಿಸಿ ಭಾರತದ ದುಂದುಭಿಯನ್ನು ಮೊಳಗಿಸಿದರು. ಇಂತಹ ಅನರ್ಘ್ಯ ರತ್ನಗಳು ಜನಿಸಿರುವ ಭಾರತ ಮಾತೆಯ ಒಡಲಲ್ಲಿ ಈಗ ಅಭಿಮಾನಶೂನ್ಯರ ಸಂತಾನವೇ ಹೆಚ್ಚಾಗುತ್ತಿದ್ದು, ಭೋಗ ಜೀವನಕ್ಕೆ ದಾಸರಾಗಿ, ವಿದೇಶೀ ಸಂಸ್ಕೃತಿಯೇ ಶ್ರೇಷ್ಠವೆಂದು ತಿಳಿಯುತ್ತಿರುವುದು ನೋವಿನ ಸಂಗತಿಯೇ.

ಇದಕ್ಕೆ ಕಾರಣರಾರು? ನಮ್ಮ ದೇಶದ ಸಂಸ್ಕೃತಿಯ ಹಿರಿಮೆಯನ್ನು ತಿಳಿಸದೇ ಮಕ್ಕಳನ್ನು ಬೆಳೆಸುವ ತಂದೆತಾಯಿಯರೋ, ಅಥವಾ ಗುರುಹಿರಿಯರೋ ಅಥವಾ ಸಮಾಜವೋ ತಿಳಿಯದಾಗಿದೆ. ಇನ್ನು ಮುಂದಾದರೂ ಮಕ್ಕಳ ಭವಿಷ್ಯವನ್ನು ರೂಪಿಸುವ ಪ್ರತಿಯೊಬ್ಬರೂ ಭವ್ಯಭಾರತದ ಹಿರಿಮೆಯನ್ನು ಅವರಿಗೆ ಚಿಕ್ಕಂದಿನಿಂದಲೇ ತಿಳಿಸುವ ಪ್ರಯತ್ನ ಮಾಡಲಿ, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸ್ವಾಮಿ ವಿವೇಕಾನಂದರ ರಾಷ್ಟ್ರಪ್ರೇಮದ ಬಗ್ಗೆ ಅರಿವು ಮೂಡಿಸಲಿ ಎಂದು ಹಾರೈಸೋಣವೇ?

**–ಕೆ. ಗಾಯತ್ರಿ ಮಂಜುನಾಥ್, ಕುಣಿಗಲ್**

### ವಿಫಲಗೊಂಡ ಉನ್ನತ ಶಿಕ್ಷಣ ವ್ಯವಸ್ಥೆ

ಕೇವಲ ಐವತ್ತು ವರ್ಷಗಳ ಹಿಂದೆ ಕೂಡ ಭಾರತದ ವಿಶ್ವವಿದ್ಯಾನಿಲಯಗಳು ಉತ್ಕೃಷ್ಟತೆಗೆ ಮತ್ತು ಶೈಕ್ಷಣಿಕ ಗುಣಮಟ್ಟಕ್ಕೆ ಹೆಸರುವಾಸಿಯಾಗಿದ್ದವು. ಜಾಗತಿಕ ರಂಗದಲ್ಲಿ ಹೆಸರು ಮಾಡಿದ ಅನೇಕ ವಿಜ್ಞಾನಿಗಳು ಮತ್ತು ದಾರ್ಶನಿಕರು ಈ ವಿಶ್ವವಿದ್ಯಾನಿಲಯಗಳಿಂದ ಉತ್ತೀರ್ಣರಾಗಿದ್ದರು. ಆದರೆ ಈಗ ಪರಿಸ್ಥಿತಿ ತದ್ವಿರುದ್ಧವಾಗಿದೆ ಎಂದು ತಮ್ಮ ಒಂದು ಲೇಖನದಲ್ಲಿ ಶ್ರೀ ಸುಭಾಷ್ ಕಾಕ್ ಹೇಳುತ್ತಾರೆ.

ದುರ್ಬಲವಾದ ಉನ್ನತ ಶಿಕ್ಷಣ ವ್ಯವಸ್ಥೆಯೇ ವಿದ್ಯಾರ್ಥಿಗಳ ವೈಫಲ್ಯಕ್ಕೆ ಕಾರಣ.ನಮ್ಮ ದೇಶ ಎದುರಿಸುತ್ತಿರುವ ಅನೇಕ ಸಮಸ್ಯೆಗಳ ವಿಶ್ಲೇಷಣೆ ಮತ್ತು ನೂತನ ಪರಿಹಾರಗಳನ್ನು ಕಂಡುಹಿಡಿಯುವ ಅನ್ವೇಷಣೆಗಳನ್ನು ಕೈಗೊಳ್ಳುವುದರಲ್ಲಿಯೂ ವಿಶ್ವವಿದ್ಯಾನಿಲಯಗಳು ವಿಫಲವಾಗಿರುವುದು ದೌರ್ಭಾಗ್ಯದ ಸಂಗತಿ.

ಭಾರತದ ವಿಶ್ವವಿದ್ಯಾನಿಲಯಗಳು ಸರ್ಕಾರದ ನಿಯಂತ್ರಣದಲ್ಲಿರುವುದೇ ಈ ವಿಫಲತೆಗೆ ಕಾರಣ. ಶಿಕ್ಷಣ ಇಲಾಖೆಗಳು ವಿಶ್ವವಿದ್ಯಾನಿಲಯಗಳಲ್ಲಿ ಯಾವುದೇ ಮಾರ್ಪಾಡು ಅಥವಾ ಗುಣಾತ್ಮಕ ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ. ಅದಲ್ಲದೆ ಇರುವ ಸೌಲಭ್ಯಗಳ ಸರಿಯಾದ ಉಪಯೋಗಕ್ಕೆ ಬೇಕಾದ ಧನ ಸಹಾಯದ ಕೊರತೆ ಕೂಡ ಅನೇಕ ವಿಶ್ವವಿದ್ಯಾನಿಲಯಗಳನ್ನು ಕಾಡುತ್ತಿದೆ. ಅವು ತಮಗೆ ಬೇಕಾದ ಸಂಪನ್ಮೂಲಗಳನ್ನು ತಾವೇ ಸ್ವಂತವಾಗಿ ಪಡೆದುಕೊಳ್ಳಲು ಬೇಕಾದ ಯಾವುದೇ ವ್ಯವಸ್ಥೆ ಇಲ್ಲದಿರುವುದರಿಂದ, ಎಲ್ಲದಕ್ಕೂ ಸರ್ಕಾರವನ್ನು ಯಾಚಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಶೈಕ್ಷಣಿಕ ಗುಣಮಟ್ಟ ಕುಗ್ಗಿರುವುದು ಮಾತ್ರವಲ್ಲ, ಅತ್ಯಗತ್ಯವಾದ ವಿವಿಧ ಸಂಶೋಧನಾ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ.

ಕೈಗಾರಿಕೀಕರಣ ಮತ್ತು ಮಾಹಿತಿ ತಂತ್ರಜ್ಞಾನದ ಅಭೂತಪೂರ್ವ ಬೆಳವಣಿಗೆ ವಿಶ್ವವಿದ್ಯಾನಿಲಯಗಳ ಅಧ್ಯಯನ ವಿಷಯಗಳ ಮೇಲೆ ಕೂಡ ಪರಿಣಾಮ ಬೀರಿದೆ. ಮೂಲಭೂತ ವೈಜ್ಞಾನಿಕ ಸಂಶೋಧನೆಯ ಕ್ಷೇತ್ರಕ್ಕೆ ಧಕ್ಕೆ ಬಂದಿದೆ. ಭಾಷಾಶಾಸ್ತ್ರ ಮತ್ತು ಮಾನವೀಯ ವಿಷಯಗಳನ್ನು ಗಂಭೀರವಾಗಿ ಅಧ್ಯಯನ ಮಾಡುವವರೇ ಇಲ್ಲವಾಗಿದೆ. ಅ ವಿಷಯಗಳ ಡಿಪಾರ್ಟಮೆಂಟ್‌ಗಳನ್ನು ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಮುಚ್ಚಿಬಿಡಲಾಗಿದೆ.

ಮಾನವ ನಿರ್ಮಾಣವೇ ಶಿಕ್ಷಣದ ಗುರಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಈ ಬಗೆಯ ಅತಂತ್ರ ಶೈಕ್ಷಣಿಕ ವ್ಯವಸ್ಥೆ ಸುಸ್ಥಿರ ಸಮಾಜಕ್ಕೆ ಬೇಕಾದ ಅರ್ಹ ವ್ಯಕ್ತಿಗಳನ್ನು ನಿರ್ಮಾಣ ಮಾಡಬಲ್ಲುದೇ? ಇಲ್ಲದಿದ್ದರೆ ಇದರ ಜವಾಬ್ದಾರಿ ಯಾರದು? ಸಾಮಾಜದಲ್ಲಿ ಮೌಲ್ಯಗಳ ಅಧಃಪತನಕ್ಕೆ ಶಿಕ್ಷಣ ವ್ಯವಸ್ಥೆಯ ವಿಫಲತೆಯೇ ಕಾರಣವಲ್ಲವೆ? ಯೋಚಿಸಿ ನೋಡಿ.